# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1344 (1530) |
| ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 17.03.2026 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | 2023-2025ನೇ ಅವಧಿಯಲ್ಲಿ ನಡೆದ Global Investors Meet ನಲ್ಲಿ ಎಷ್ಟು MOU ಗಳಿಗೆ ಸಹಿ ಮಾಡಲಾಗಿದೆ; ಈ MOU ಗಳ ನಂತರ ಎಷ್ಟು ಉದ್ಯಮಗಳು ರಾಜ್ಯದಲ್ಲಿ ಪ್ರಾರಂಭವಾಗಿವೆ ಮತ್ತು ಎಲ್ಲೆಲ್ಲಿ ಪ್ರಾರಂಭವಾಗಿವೆ; ಇದರಿಂದ ರಾಜ್ಯದಲ್ಲಿ ಪ್ರತಿ ವರ್ಷ ಎಷ್ಟು ಉದ್ಯೋಗಗಳು ಸೃಷ್ಟಿಯಾಗಿವೆ;<br>ಅನುಷ್ಠಾನಗೊಳ್ಳದೇ ಉಳಿದ MOU ಗಳ ಸಂಖ್ಯೆ ಎಷ್ಟು; | 2023-2025ನೇ ಅವಧಿಯಲ್ಲಿ 117 ಕೈಗಾರಿಕೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಈ ಒಡಂಬಡಿಕೆಯಿಂದ ರಾಜ್ಯದಲ್ಲಿ ರೂ.6,70,560 ಕೋಟಿ ಬಂಡವಾಳ ಹೂಡಿಕೆಯಾಗಲಿದೆ ಹಾಗೂ 2,47,571 ಉದ್ಯೋಗ ಸೃಜನೆಯಾಗಲಿದೆ.<br>117 ಕೈಗಾರಿಕೆಗಳ ಪೈಕಿ 57 ಘಟಕಗಳಿಗೆ ಈಗಾಗಲೇ ಅನುಮೋದನೆ ನೀಡಲಾಗಿದ್ದು, ಒಟ್ಟು ರೂ. 79,907.94 ಕೋಟಿ ಮೊತ್ತದ ಬಂಡವಾಳ ಹೂಡಿಕೆಯಾಗಲಿದೆ ಮತ್ತು 55,729 ಜನರಿಗೆ ಉದ್ಯೋಗ ದೊರೆಯಲಿದೆ. ಇವುಗಳಲ್ಲಿ ಈಗಾಗಲೇ 26 ಕೈಗಾರಿಕೆಗಳು ಪ್ರಾರಂಭಗೊಂಡಿದ್ದು, 13688 ಉದ್ಯೋಗಗಳು ಸೃಜನೆಯಾಗಿದೆ.<br>ಉಳಿದ 60 ಕಂಪನಿಗಳ ಜೊತೆ ನಿರಂತರ ಸಂಪರ್ಕದಲ್ಲಿದ್ದು, ಕಂಪನಿಗಳು ಆದಷ್ಟು ಬೇಗ ಅಧಿಕೃತ ಅರ್ಜಿಯನ್ನು ಸಲ್ಲಿಸಲು ಮನವೊಲಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. |
| ಆ | ಹೂಡಿಕೆ ಆಕರ್ಷಣೆಯಲ್ಲಿ ಗುಜರಾತ್, ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳೊಂದಿಗೆ ಹೋಲಿಸಿದರೆ ಕರ್ನಾಟಕದ ಸ್ಥಾನಮಾನವು ಹೇಗಿದೆ; | ಹೂಡಿಕೆ ಆಕರ್ಷಣೆಯಲ್ಲಿ ಗುಜರಾತ್, ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳೊಂದಿಗೆ ಹೋಲಿಸಿದರೆ ಕರ್ನಾಟಕವು 4ನೇ ಸ್ಥಾನದಲ್ಲಿದೆ.<br>ಕರ್ನಾಟಕ ರಾಜ್ಯವು 2025-26 ನೇ ಸಾಲಿನಲ್ಲಿ ಏಪ್ರಿಲ್ 2025 ರಿಂದ ಡಿಸೆಂಬರ್ 2025 ರ ಅಂತ್ಯಕ್ಕೆ ರೂ.96,644 ಕೋಟಿ ವಿದೇಶಿ ಹೂಡಿಕೆ ಆರ್ಕಷಿಸುವುದರೊಂದಿಗೆ ದೇಶದಲ್ಲಿ 2 ನೇ ಸ್ಥಾನದಲ್ಲಿದೆ. |

| | | |
|---|---|---|
| ಇ | ಕಳೆದ ಮೂರು ವರ್ಷಗಳಲ್ಲಿ ಕೈಗಾರಿಕೆಗಳಿಂದ ಎಷ್ಟು ಉದ್ಯೋಗಗಳ ಭರವಸೆ ನೀಡಲಾಗಿತ್ತು; ವಾಸ್ತವವಾಗಿ ಸೃಷ್ಟಿಯಾದ ಉದ್ಯೋಗಗಳ ಸಂಖ್ಯೆ ಎಷ್ಟು; ಸ್ಥಳೀಯ ಕನ್ನಡಿಗರಿಗೆ ನೀಡಿದ ಉದ್ಯೋಗ ಶೇಕಡವಾರು ಎಷ್ಟು? | ಕಳೆದ 03 ವರ್ಷಗಳಲ್ಲಿ (2022-23 ರಿಂದ ಫೆಬ್ರುವರಿ 2026ರ ಅಂತ್ಯದವರೆಗೆ) ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ ಒಟ್ಟು 2028 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಇವುಗಳಿಂದ ರೂ.511732.88 ಕೋಟಿ ಬಂಡವಾಳ ಹೂಡಿಕೆ ಮತ್ತು 716148 ಉದ್ಯೋಗವಕಾಶ ನಿರೀಕ್ಷಿಸಲಾಗಿದೆ.<br><br>ಈ ಯೋಜನೆಗಳ ಪೈಕಿ 81 ಯೋಜನೆಗಳು ಅನುಷ್ಠಾನಗೊಂಡಿದ್ದು, ರೂ.69564.20 ಕೋಟಿ ಬಂಡವಾಳ ಹೂಡಿಕೆಯಾಗಿದೆ ಮತ್ತು 106225 ಉದ್ಯೋಗಾವಕಾಶ ಸೃಜನೆಯಾಗಿರುತ್ತದೆ. ಉಳಿದ ಯೋಜನೆಗಳು ವಿವಿಧ ಅನುಷ್ಠಾನ ಹಂತಗಳಲ್ಲಿರುತ್ತವೆ.<br><br>ಇವುಗಳಲ್ಲಿ ಬಹುತೇಕ ಮಧ್ಯಮ, ಬೃಹತ್ ಹಾಗೂ ಮೆಗಾ ಯೋಜನೆಗಳಾಗಿದ್ದು, ಅನುಷ್ಠಾನಕ್ಕೆ 3-5 ವರ್ಷಗಳ ಕಾಲಾವಧಿ ಬೇಕಾಗಿರುತ್ತದೆ.<br><br>ಕೈಗಾರಿಕಾ ನೀತಿ 2025-30 ರನ್ವಯ ಉತ್ತೇಜನ ಮತ್ತು ರಿಯಾಯಿತಿ ಪಡೆಯುವ ಘಟಕಗಳು 'ಡಿ' ವರ್ಗದಲ್ಲಿ ಶೇ.100 ರಷ್ಟು ಹಾಗೂ ಒಟ್ಟು ಉದ್ಯೋಗಗಳಲ್ಲಿ ಶೇ. 70 ರಷ್ಟು ಕನ್ನಡಿಗರಿಗೆ ನೇಮಕಾತಿ ಮಾಡಬೇಕಾಗಿರುತ್ತದೆ. |

**ಸಿಐ 63 ಎಸ್‌ಪಿಐ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು